# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಎಸ್.ಎಲ್. ಬೋಜೇಗೌಡ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1302(1528) |
| ಉತ್ತರಿಸಬೇಕಾದ ದಿನಾಂಕ | 17.03.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೆಂಗಳೂರು ನಗರವನ್ನು ಹೊರತುಪಡಿಸಿ ರಾಜ್ಯದ ನಗರ ಪ್ರದೇಶಗಳಲ್ಲಿ ಕಳೆದ 5 ವರ್ಷದಿಂದ ಈವರೆಗೆ ಯಾವ ಯಾವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿ/ಯೋಜನೆಗಳನ್ನು ರೂಪಿಸಲಾಗಿದೆ; ಇಲ್ಲಿಯವರೆಗೂ ಮುಕ್ತಾಯವಾಗಿರುವ ಕಾಮಗಾರಿ/ ಯೋಜನೆಗಳು ಯಾವುವು ಮುಕ್ತಾಯವಾಗದೇ ಬಾಕಿಯಿರುವ ಕಾಮಗಾರಿ/ಯೋಜನೆಗಳು ಯಾವುವು; ಯಾವ ಕಾರಣಕ್ಕಾಗಿ ಬಾಕಿ ಇವೆ: (ಸಂಪೂರ್ಣವಾದ ಮಾಹಿತಿ ನೀಡುವುದು)</td><td>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿ / ಯೋಜನೆಗಳನ್ನು ರೂಪಿಸಲು ಕಳೆದ 5 ವರ್ಷಗಳಲ್ಲಿ(2020-21 ರಿಂದ 2024-25) ಬೆಂಗಳೂರು ನಗರವನ್ನು ಹೊರತುಪಡಿಸಿ ರಾಜ್ಯ ಯೋಜನಾ ಕಾರ್ಯಕ್ರಮದಡಿಯಲ್ಲಿ ಮತ್ತು ಕೇಂದ್ರ ಪುರಸ್ಕೃತ ಅಮೃತ್ ಯೋಜನಾ ಕಾರ್ಯಕ್ರಮದಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುವ ಯೋಜನೆಗಳ ಮತ್ತು ಅದರ ವಸ್ತು ಸ್ಥಿತಿಯ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>(ಆ)</td><td>ಕಳೆದ 5 ವರ್ಷದಿಂದ ಈ ಯೋಜನೆಗಳಿಗೆ ಈವರೆಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; ಕಾಮಗಾರಿ/ ಯೋಜನೆವಾರು ಅನುದಾನದ ಸಂಪೂರ್ಣವಾದ ಮಾಹಿತಿ ನೀಡುವುದು;</td><td>ಮಂಡಳಿಯು ರಾಜ್ಯ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳಿಗೆ ಇಡಿಗಂಟಿನ ರೂಪದಲ್ಲಿ ಒಟ್ಟಾರೆ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ:-
<table>
<tr><th rowspan="2">ಯೋಜನೆ</th><th colspan="5">ವರ್ಷವಾರು ಬಿಡುಗಡೆ ಮಾಡಲಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><th>2020-21</th><th>2021-22</th><th>2022-23</th><th>2023-24</th><th>2024-25</th></tr>
<tr><td>ನೀರು ಸರಬರಾಜು</td><td>400.00</td><td>375.00</td><td>400.00</td><td>350.00</td><td>300.00</td></tr>
<tr><td>ಒಳಚರಂಡಿ</td><td>300.00</td><td>130.00</td><td>200.00</td><td>250.00</td><td>300.00</td></tr>
<tr><td>ಒಟ್ಟು</td><td>700.00</td><td>505.00</td><td>600.00</td><td>600.00</td><td>600.00</td></tr>
</table></td></tr>
</table>

| | | |
|---|---|---|
| (ಇ) | ಕೆಲವು ಕಾಮಗಾರಿಗಳಿಗೆ ಸರ್ಕಾರದ ಸ್ಪಷ್ಟ ಸೂಚನೆ ಹಾಗೂ ಆದೇಶಗಳಿದ್ದರೂ ಸಹ ಇಲಾಖೆಯಿಂದ ಪಾಲನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪಾಲನೆ ಮಾಡದಿರುವವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರದಿಂದ ನೀಡಲಾದ ಸೂಚನೆ ಹಾಗೂ ಆದೇಶಗಳ ಅನುಸಾರ ಮಂಡಳಿಯ ವತಿಯಿಂದ ಕ್ರಮ ಕೈಗೊಳ್ಳಲಾಗಿರುತ್ತಿರುತ್ತದೆ. |

ಸಂಖ್ಯೆ : ನಅಇ 53 ಯುಎಂಎಸ್ 2026

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು.